ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/62/ಇಎಸ್‌ಟಿ(6)2016

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು–560 001,
ದಿನಾಂಕ:18/02/2017

**ಸುತ್ತೋಲೆ**

ವಿಷಯ: ಇ– ಪ್ರೊಕ್ಯೂರ್‌ಮೆಂಟ್ ಮೂಲಕ ಸೆಕ್ಯೂರಿಟಿ ನೇಮಕಾತಿ ಮಾಡುವ ಬಗ್ಗೆ

ಉಲ್ಲೇಖ: ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:ಡಿಟಿಇ/71/ಇಎಸ್‌ಟಿ(6)2015 ದಿನಾಂಕ:14/01/2016

*******

ತಾಂತ್ರಿಕ ಶಿಕ್ಷಣ ಇಲಾಖೆ ಅಧೀನದಲ್ಲಿರುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ಸರ್ಕಾರಿ ಪಾಲಿಟೆಕ್ನಿಕ್/ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ/ಜಿಆರ್‌ಐಸಿಪಿ/ಎಸ್‌ಆರ್‌ಸಿಬಿಎಂ./ ಪ್ರಿನ್ಸಿಪಾಲರುಗಳಿಗೆ ಈ ಮೂಲಕ ಗಮನಕ್ಕೆ ತರ ಬಯಸುವುದೇನೆಂದರೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸೆಕ್ಯೂರಿಟಿ ನೇಮಕಾತಿ ಮಾಡಲು ಉಲ್ಲೇಖ(1)ರ ಸುತ್ತೋಲೆಯಲ್ಲಿ ಸೂಚಿಸಲಾಗಿದ್ದು, ಅದರಂತೆ ಟೆಂಡರ್ ಕರೆದು ತಮ್ಮ ಹಂತದಲ್ಲಿ ರಚಿಸಲಾದ ಸಮಿತಿಯ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಕರೆಯುವ ಮೊದಲು ವಿಧಿಸಲಾದ ನಿಬಂಧನೆಗಳಂತೆ ಸಮಿತಿಯ ಮುಂದೆ ಮಂಡಿಸಿ ಪರಿಶೀಲಿಸಿ ನಿಯಮದಂತೆ ಶಿಫಾರಸ್ಸು ಮಾಡತಕ್ಕದ್ದು. ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ನಿರ್ದೇಶಕರ ಹಂತದಲ್ಲಿ ಅನುಮೋದನೆ ನೀಡದೇ ಪ್ರಸ್ತಾವನೆಯನ್ನು ಹಿಂತಿರುಗಿಸಲಾಗುವುದು. ಇನ್ನು ಮುಂದೆ ಬೇಜವಾಬ್ದಾರಿತನದಿಂದ ನಿಬಂಧನೆಗಳನ್ನು ಪರಿಶೀಲಿಸದೆ ಶಿಫಾರಸ್ಸು ಮಾಡಿದಲ್ಲಿ ಮುಂದಿನ ಆಗು ಹೋಗುಗಳಿಗೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಪ್ರಸ್ತಾವನೆಯ ಜೊತೆಯಲ್ಲಿ ಈ ಕೆಳಕಂಡ ದಾಖಲಾತಿಗಳನ್ನು ದ್ವಿ ಪ್ರತಿಗಳಲ್ಲಿ ಲಗತ್ತಿಸಿ ಸಲ್ಲಿಸತಕ್ಕದ್ದು.

1. ಸೆಕ್ಯೂರಿಟಿ ನೇಮಕಾತಿಯ ಆದೇಶ ಸೂಚಿ
2. ಭಾಗವಹಿಸುವ ಏಜೆನ್ಸಿಗಳ ತುಲನಾತ್ಮಕ ಪಟ್ಟಿ
3. ಟೆಂಡರ್ ನಡವಳಿ
4. ಟೆಂಡರ್‌ನಲ್ಲಿ ಭಾಗವಹಿಸಿರುವ ಏಜೆನ್ಸಿಗಳ ಆರ್ಥಿಕ ಬಿಡ್ ನಮೂನೆ ಪ್ರಿನ್ಸಿಪಾಲರ ಮೊಹರಿನೊಂದಿಗೆ
5. ಅಂತಿಮವಾಗಿ ಆಯ್ಕೆ ಮಾಡಲಾದ ಏಜೆನ್ಸಿಯ ಆಯ್ಕೆಯನ್ನು ಯಾವ ಆಧಾರದಲ್ಲಿ ಅಂತಿಮವಾಗಿ ಆಯ್ಕೆ ಮಾಡಲಾಯಿತು ಎಂಬ ಬಗ್ಗೆ ಸ್ಪಷ್ಟ ಶಿಫಾರಸ್ಸಿನಿಂದ ಕೂಡಿದ ವರದಿ.

ನಿರ್ದೇಶಕರು

ಇವರಿಗೆ

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ಸರ್ಕಾರಿ ಪಾಲಿಟೆಕ್ನಿಕ್/ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ/ಜಿಆರ್‌ಐಸಿಪಿ/ಎಸ್‌ಆರ್‌ಸಿಬಿಎಂ./ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಇ–ಆಡಳಿತ ಘಟಕಕ್ಕೆ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು 2. ಕಛೇರಿ ಪ್ರತಿ.